vi) ವಿಷಯ: ಶಿರಸಿ ತಾಲ್ಲೂಕಿನ ವಾನಳ್ಳಿ–ಕಕ್ಕಳ್ಳಿ ರಸ್ತೆಯ ದುರಸ್ತಿ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಶಿರಸಿ) : ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ನಾನು ಶೂನ್ಯ ವೇಳೆಯಲ್ಲಿ ಪ್ರಶ್ನೆಯನ್ನು ಕೇಳಿದ್ದು, ಉತ್ತರ ಬಂದಿದೆ. ಸಮಸ್ಯೆಯೆಂದರೆ ಗ್ರಾಮೀಣ ಒಳಭಾಗದ ಹಳ್ಳಿಗಳಿಗೆ ಅದರಲ್ಲಿ ವಿಶೇಷವಾಗಿ ವಾನಳ್ಳಿ–ಕಕ್ಕಳ್ಳಿಗೆ ದೋರಣಗೇರಿ, ಮುಷ್ಕಿ, ಶಿರಗುಣಿ ತನಕ . .

ಅಧ್ಯಕ್ಷರು : ಅದನ್ನೆಲ್ಲಾ ನೀವು ಹೇಳಿಲ್ಲ. ವಾನಳ್ಳಿ–ಕಕ್ಕಳ್ಳಿ ಬಗ್ಗೆ ಅಷ್ಟೇ ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅದು ಮುಖ್ಯರಸ್ತೆ ಅಧ್ಯಕ್ಷರೆ, ಅಲ್ಲಿಗೆ ಹೋದ ಮೇಲೆ ಮುಂದಕ್ಕೆ ಹೋಗುವುದು. ಮುಂದಿನ 7 ಹಳ್ಳಿಗಳಿಗೆ, ಒಟ್ಟು 15 ಕಿ.ಮೀ. ರಸ್ತೆಯಿದ್ದು, ಈ ಪೈಕಿ 8 ಕಿ.ಮೀ. ಜಿಲ್ಲಾ ಪಂಚಾಯತಿ ರಸ್ತೆ ಇದೆ. ಸಿ.ಡಿ. ಹಾಳಾಗಿ ಹೋಗಿದೆ. ನಮಗೆ maıntenanceಗೆ ಯಾವುದೇ grants ಸಿಗುತ್ತಿಲ್ಲ. ಸಿ.ಡಿ. ಅಷ್ಟೇ ಅಲ್ಲ, ಹೊಂಡಗಳಾಗಿ ಧರೆ ಕುಸಿದು ಬಸ್ ನಿಂತು ಹೋಗಿದೆ. ಬಸ್ ನಿಂತು ಹೋಗಿರುವುದರಿಂದ ಸುಮಾರು 75 ಹುಡುಗರಿಗೆ ಕಾಲೇಜಿಗೆ ಬರುವುದಕ್ಕೆ ಕಷ್ಟವಾಗುತ್ತಿದೆ.

ಅಧ್ಯಕ್ಷರು : rain damages ದುರಸ್ತಿ ಮಾಡಿಸಿಕೊಡಿ.

(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಪ್ರಶ್ನೆ :

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ವಾನಳ್ಳಿ– ಕಕ್ಕಳ್ಳಿ ರಸ್ತೆಯು ಈಗ ಬಿದ್ದಿರುವ ಮಳೆಯ ಕಾರಣದಿಂದಾಗಿ ಮಣ್ಣು ಕುಸಿತವಾಗಿದ್ದು, ರಸ್ತೆಗಳಲ್ಲಿ ದೊಡ್ಡ ದೊಡ್ಡ ಹೊಂಡಗಳಾಗಿ ಬಹಳ ವರ್ಷಗಳಿಂದಲೂ ನಿರಂತರವಾಗಿ ಸಂಚರಿಸುತ್ತಿದ್ದ ಬಸ್ ನಿಂತು ಹೋಗಿದೆ ಹಾಗೂ ಸಾರ್ವಜನಿಕರಿಗೂ ತಿರುಗಾಡುವುದು ತುಂಬಾ ತೊಂದರೆಯಾಗಿದೆ. ಈ ರಸ್ತೆಯು ಜಿಲ್ಲಾ ಪಂಚಾಯತ್‌ಗೆ ಸೇರಿದ ರಸ್ತೆಯಾಗಿದ್ದು 8 ಕಿ.ಮೀ. ಉದ್ದ ಹೊಂದಿದೆ. ಈ ರಸ್ತೆಯ

ಹಿಂದಿನ – ಮುಂದಿನ ಭಾಗ ಪಿ.ಡಬ್ಲ್ಯೂ.ಡಿ.ಗೆ ಸೇರಿದ್ದಾಗಿದೆ. ಈ 8 ಕಿ.ಮೀ. ರಸ್ತೆಯನ್ನು ಪಿ.ಡಬ್ಲ್ಯೂ.ಡಿ.ಗೆ ಮೇಲ್ದರ್ಜೆಗೇರಿಸಬೇಕಾಗಿದೆ. ತಕ್ಷಣದಲ್ಲಿ ಈ ರಸ್ತೆಯನ್ನು ಸಂಚಾರಕ್ಕೆ ಯೋಗ್ಯವಾಗಿ ನಿರ್ವಹಣೆ ಮಾಡುವ ಅಗತ್ಯವಿದೆ.

ಅತೀವೃಷ್ಟಿಯಲ್ಲಿಯೂ ಸಹ ಹಣ ಬಿಡುಗಡೆಯಾಗದಿರುವುದು ಸ್ಥಳೀಯವಾಗಿ ರಸ್ತೆ ನಿರ್ವಹಣೆಗೆ ತೊಂದರೆಯಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ತಕ್ಷಣ ಈ ರಸ್ತೆಯನ್ನು ಸಂಚಾರಕ್ಕೆ ಯೋಗ್ಯವಾಗಿ ನಿರ್ವಹಣೆ ಮಾಡಿ ಗ್ರಾಮೀಣ ಒಳ ಹಳ್ಳಿಗಳ ಜನತೆಗಾಗಿರುವ ತೊಂದರೆಯನ್ನು ದೂರ ಮಾಡುವ ಮುಖ್ಯ ವಿಷಯಕ್ಕೆ ಸಂಬಂಧಿಸಿದಂತೆ ಇಂದು ದಿನಾಂಕ:09–07–2014 (ಬುಧವಾರ) ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿ ಕೊಡಬೇಕಾಗಿ ಕೋರುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ) ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು ಹಾಗೂ ಪ್ರವಾಸೋದ್ಯಮದ ಸಚಿವರು) : ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ವಾನಳ್ಳಿ ಕಕ್ಕಳ್ಳಿ ದೋರಣಗೇರಿ ರಸ್ತೆಯು ಗ್ರಾಮೀಣ ರಸ್ತೆಯಾಗಿರುತ್ತದೆ. ಈ ರಸ್ತೆಯ ಉದ್ದವು 15 ಕಿ.ಮೀ.ಗಳಿದ್ದು, ಡಾಂಬರ್ ರಸ್ತೆಯಾಗಿರುತ್ತದೆ.

ಸದರಿ ಡಾಂಬರ್ ರಸ್ತೆಯಲ್ಲಿ ಕೆಲವು ಗುಂಡಿ ಮತ್ತು ಹೊಂಡ ಗಳಾಗಿದ್ದು, ಬಸ್ ಸಂಚಾರ ಸ್ಥಗಿತಗೊಂಡಿರುವುದಾಗಿ ವರದಿಯಾಗಿದೆ.

ಈ ರಸ್ತೆಯನ್ನು ಹೊಸದಾಗಿ ಮರು ಡಾಂಬರೀಕರಣ ಮಾಡಿ ಸುಸ್ಥಿತಿಗೆ ತರಲು ರೂ.2.50 ಕೋಟಿಗಳ ಅನುದಾನದ ಅವಶ್ಯವಿರುತ್ತದೆ.

ತುರ್ತಾಗಿ ರಸ್ತೆಯಲ್ಲಿ ಕುಸಿದು ಬಿದ್ದ ಮಣ್ಣನ್ನು ತೆಗೆದು ಹಾಕಿ ಹಾಗೂ ಹಾಳಾದ ಸಿ.ಡಿ. ದುರಸ್ಥಿ ಮಾಡಲು ರೂ.10.00 ಲಕ್ಷಗಳ ಅನುದಾನದ ಅವಶ್ಯಕತೆಯಿರುತ್ತದೆ.

ಪ್ರತಿ ವರ್ಷ ಗ್ರಾಮೀಣ ರಸ್ತೆಗಳ ನಿರ್ವಹಣೆ/ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ/ಲೆಕ್ಕಶೀರ್ಷಿಕೆಯಡಿ ಜಿಲ್ಲಾ ಪಂಚಾಯತಿಗೆ ಅನುದಾನ ಒದಗಿಸ ಲಾಗುತ್ತಿದೆ.

ಜಿಲ್ಲಾ ಪಂಚಾಯತಿಗೆ ಸಿಎಂಜಿಎಸ್‌ವೈ ಲೆಕ್ಕಶೀರ್ಷಿಕೆ–3054, 13ನೇ ಹಣಕಾಸು ಯೋಜನೆ ಮತ್ತು ಯೋಜನೇತರ ಲೆಕ್ಕಶೀರ್ಷಿಕೆ–3054 (ಟಾಸ್ಕ್ ಫೋರ್ಸ್) ರಡಿ ಲಭ್ಯವಾಗುವ ಅನುದಾನದಡಿ ಜಿಲ್ಲಾ ಪಂಚಾಯತಿ ವತಿ ಯಿಂದ ಸದರಿ ಕಾಮಗಾರಿಯನ್ನು ಆಧ್ಯತೆ ಮೇರೆಗೆ ಕೈಗೊಳ್ಳಬೇಕಾಗಿರುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ(ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು) (ಶ್ರೀ ಹೆಚ್.ಕೆ.ಪಾಟೀಲ್, ಮಾನ್ಯ ಗ್ರಾಮೀಣಾ ಭಿವೃದ್ಧಿ ಮತ್ತ ಪಂಚಾಯತ್ ರಾಜ್ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಕಾಗೇರಿಯವರೆ, ನಾಳೆ ನನಗೆ ಪತ್ರ ಕೊಡಿ. ನಾನು ಡಿ.ಸಿ.ಯವರಿಗೆ ಹೇಳಿ ಅತಿವೃಷ್ಟಿಯಿಂದ ಹಾಳಾಗಿರುವ ರಸ್ತೆಗಳಿಗೆ ಇರುವ ಅನುದಾನದಲ್ಲಿ ರಿಪೇರಿ ಮಾಡಿಸಿ ಕೊಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅತಿವೃಷ್ಟಿ ಹಣ ಯಾವುದೂ ಬಿಡುಗಡೆಯಾಗಿಲ್ಲ.

ಅಧ್ಯಕ್ಷರು : ಅವರು ಕೆಲಸ ಮಾಡುತ್ತಾರೆ, ಬಿಡಿ.

ಶ್ರೀ ಆರ್.ವಿ.ದೇಶಪಾಂಡೆ : ನೀವು ನಾಳೆ ನನಗೆ ಪತ್ರ ಕೊಡಿ. ನಾಳೆ ನಾನು ಕೆಲಸ ಮಾಡಿಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : 8 ಕಿ.ಮೀ. ರಸ್ತೆ ಕೆಲಸ ಆಗಬೇಕು.

ಅಧ್ಯಕ್ಷರು : ಆಯಿತು.

Viii) ವಿಷಯ : ಸಿ.ಎಸ್.ಪುರ ಹೋಬಳಿ ವ್ಯಾಪ್ತಿಯಲ್ಲಿ ಸುಳ್ಳು ಆಪಾದನೆ ಮಾಡಿ ಜೈಲಿಗೆ ಕಳುಹಿಸಿರುವ ಬಗ್ಗೆ.

ಶ್ರೀ ಎಂ.ಟಿ.ಕೃಷ್ಣಪ್ಪ(ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ಸಿ.ಎಸ್.ಪುರ ಹೋಬಳಿ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಯಲ್ಲಿ ಮೊಹಿದ್ದೀನ್ ಸಾಬ್